# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ಹೇರೋಹಳ್ಳಿ ಉಪ-ವಿಭಾಗದ,
ವಾರ್ಡ್ ನಂ.30, ಹೇರೋಹಳ್ಳಿ, ಬೆಂಗಳೂರು-560091.

---

ಸಂಖ್ಯೆ: .ಸ.ಅ: ಹೇ.ವಾ.ಕ: ಪಿಆರ್/10/2022-23

ದಿನಾಂಕ : 17-01-2023

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾ.ರಾ.ನಗರ ವಲಯ, ಹೇರೋಹಳ್ಳಿ ಉಪ-ವಿಭಾಗದ ವಾರ್ಡ್ ನಂ.30ರಲ್ಲಿ ದಿನಾಂಕ: 11.01.2023 ರಲ್ಲಿ ನಡೆದ ವಾರ್ಡ್ ಕಮಿಟಿ ಸಭಾ ನಡವಳಿ.**

**ಈ ಕೆಳಕಂಡ ಸದಸ್ಯರು ಹಾಗೂ ಅಧಿಕಾರಿಗಳು ಸಭೆಯಲ್ಲಿ ಹಾಜಾರಾಗಿದ್ದವರ ವಿವರಗಳ**

| ಕ್ರ.ಸಂ | ಹೆಸರು | ಪದನಾಮ |
|---|---|---|
| 01 | ಶ್ರೀ ಕೆ.ಶ್ರೀನಿವಾಸಯ್ಯ | ನೋಡಲ್ ಅಧಿಕಾರಿಗಳು. |
| 02 | ಶ್ರೀ ನಟರಾಜ್.ಎನ್ | ಸಹಾಯಕ ಅಭಿಯಂತರರು ಮತ್ತು ಸದಸ್ಯ ಕಾರ್ಯದರ್ಶಿ ವಾರ್ಡ್.72 ಹೇರೋಹಳ್ಳಿ. |
| 03 | ಶ್ರೀ ಹನುಮಂತರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 04 | ಶ್ರೀ ಪ್ರತೀಪ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 05 | ಶ್ರೀ ಮಾದಪ್ಪ.ಎಸ್.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು |
| 06 | ಶ್ರೀ ಕುಮಾರ್ | ಆರ್.ಐ |
| 07 | ಶ್ರೀ ರಾಮಕೃಷ್ಣ ಭಟ್ | ಬ್ಯಾಡರಹಳ್ಳಿ |
| 08 | ಶ್ರೀ ನಾಗೇಶ್ | ಬೀದಿದೀಪ ನಿರ್ವಹಣೆ |
| 09 | ಶ್ರೀ ರಮೇಶ್ | ಒಳಚರಂಡಿ |
| 10 | ಶ್ರೀ ಧನಂಜಯ್ಯ.ಬಿ.ಆರ್ | ಸಾರ್ವಜನಿಕರು |
| 11 | ಶ್ರೀ ಮುತ್ತಪ್ಪ | ಸಾರ್ವಜನಿಕರು |

ವಾರ್ಡ್ ಕಮಿಟಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳಾದ ಶ್ರೀ. ಕೆ.ಶ್ರೀನಿವಾಸಯ್ಯ ರವರ ಉಪಸ್ಥಿತಿಯಲ್ಲಿ ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿಗಳಾದ ಶ್ರೀ ಎನ್.ನಟರಾಜ್ ರವರು ಸಭೆಗೆ ಹಾಜರಿದ್ದು ಎಲ್ಲರಿಗೂ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ, ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯಗಳ ಬಗ್ಗೆ ತಿಳಿಸಿದರು.

**1.ಆರೋಗ್ಯ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-**

- ಶ್ರೀ ಪ್ರತೀಪ್ ಆರೋಗ್ಯ ನಿರೀಕ್ಷಣಾಧಿಕಾರಿಗಳು ಸಭೆಯಲ್ಲಿ ಮಾತನಾಡುತ್ತಾ, ವಾರ್ಡ್ ನಂ.31ರ ಪ್ರದೇಶದಲ್ಲಿ ಎಂದಿನಂತೆ ಸಾರ್ವಜನಿಕರಿಗೆ ಕೋ-ವಾಕ್ಸಿನ್ ಲಸಿಕೆಯನ್ನು ಹಾಕಲಾಗುತ್ತಿದೆ.
- ವಾರ್ಡ್ ವ್ಯಾಪ್ತಿಯಲ್ಲಿ ಕೋರೋನ ಕೋವಿಡ್-19 ಪ್ರಕರಣವು ಕಂಡುಬಂದಿರುವುದಿಲ್ಲ.
- ವಾರ್ಡ್ ವ್ಯಾಪ್ತಿಯಲ್ಲಿ ಪಾಸಿಟಿವ್ ಪ್ರಕರಣವು ಕಂಡುಬಂದಲ್ಲಿ ಅವರಿಗೆ ಸೂಕ್ತ ಚಿಕಿತ್ಸೆ ಕೊಡಲಾಗುವುದು ಎಂಬ ಮಾಹಿತಿಯನ್ನು ಸಭೆಯಲ್ಲಿ ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಆಶಾಕಾರ್ಯ ಕರ್ತೆಯರು ಪ್ರತಿ ಮನೆ ಮನೆಗೆ ಭೇಟಿ ನೀಡಿ ಸಾರ್ವಜನಿಕರ ಆರೋಗ್ಯದ ಬಗ್ಗೆ ವಿಚಾರಿಸುತ್ತಿದ್ದಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ಎಂದಿನಂತೆ ಸ್ಲಾಬ್ ಟೆಸ್ಟಿಂಗ್ ಕಾರ್ಯವು ನಡೆಯುತ್ತಿವೆ. ಪ್ರತೀ ದಿನ ಕೋವ್ಯಾಕ್ಸಿನ್ ಲಸಿಕೆಯು ಲಭ್ಯವಿದ್ದು, 18 ವರ್ಷ ಮೇಲ್ಪಟ್ಟವರು ಲಸಿಕೆಯನ್ನು ಪಡೆಯಬಹುದು. ಮತ್ತು ಕೋವಿಡ್ ಶೀಲ್ಡ್ ಲಸಿಕೆಯ ದಾಸ್ತಾನು ಇರುವುದಿಲ್ಲ. ಕೋವಿಡ್ ಶೀಲ್ಡ್ ಲಸಿಕೆಯು ಬಂದ ನಂತರ ಹೆಚ್ಚಿನ ಶಿಬಿರವನ್ನು ಆಯೋಜಿಸಿ ಎಲ್ಲಾ ಅರ್ಹ ಫಲಾನುಭವಿಗಳಿಗೆ ನೀಡಲಾಗುವುದು ಎಂದು ತಿಳಿಸಿದರು.

Scanned with OKEN Scanner

- ಆರೋಗ್ಯ ಇಲಾಖೆಯ ವತಿಯಿಂದ ವಾರ್ಡ್ ವ್ಯಾಪ್ತಿಯಲ್ಲಿ ಎಂದಿನಂತೆ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮವು ಯಶಸ್ವಿಯಾಗಿ ವಾರ್ಡ್ ಮಟ್ಟದಲ್ಲಿ ಅನುಷ್ಠಾನಗೊಳ್ಳುತ್ತಿದೆ.

2. ಘನತ್ಯಾಜ್ಯ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-

- ವಾರ್ಡ್ ವ್ಯಾಪ್ತಿಯಲ್ಲಿ ಕಸ ಸಂಗ್ರಹಿಸುವ ವಾಹನಗಳು ಪ್ರತಿ ಮನೆಮನೆಯ ಹತ್ತಿರ ಹೋಗಿ ಕಸ ಸಂಗ್ರಹಿಸುತ್ತಿರುವುದಾಗಿ ಶ್ರೀ ಮಾದಪ್ಪ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು.
- ಅಪ್ರಾಪ್ತ ವಯಸ್ಸಿನವರು ಕಸ ಸಂಗ್ರಹಿಸುವ ವಾಹನವನ್ನು ಓಡಿಸುತ್ತಿರುವುದಾಗಿ ಶ್ರೀ ಧನಂಜಯ್ ರವರು ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಈ ವಿಷಯದ ಬಗ್ಗೆ ಕುಲಂಕುಷವಾಗಿ ಪರಿಶೀಲಿಸಿ ಕ್ರಮ ವಹಿಸುವಂತೆ ಸಭೆಯಲ್ಲಿದ್ದ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.
- ಮಾರ್ಷಲ್‌ರವರು ಎಂದಿನಂತೆ ಕಾರ್ಯನಿರ್ವಹಿಸುತ್ತಿರುವುದಾಗಿ ಆರೋಗ್ಯ ಪರಿವೀಕ್ಷಕರು ಸಭೆಗೆ ತಿಳಿಸಿದರು.

3. ಬೆಸ್ಕಾಂ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು:-

- ವಾರ್ಡ್ ವ್ಯಾಪ್ತಿಯಲ್ಲಿ ಯು.ಜಿ ಕೇಬಲ್ ಅಳವಡಿಸುವ ಕಾಮಗಾರಿಯು ಒಂದು ತಿಂಗಳಿನಲ್ಲಿ ಪೂರ್ಣಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು. ಮತ್ತು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವ ಮೊದಲೇ ಸಾರ್ವಜನಿಕರಿಗೆ ಸಂದೇಶ ಕಳುಹಿಸಿರುವುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಯವರು ಮಾತಾನಾಡಿ ಯು.ಜಿ ಕೇಬಲ್ ಅಳವಡಿಸುವ ಕಾಮಗಾರಿಯನ್ನು ಆದಷ್ಟು ಬೇಗ ಮುಗಿಸುವಂತೆ ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

4. ಬೀದಿದೀಪ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು:-

- ವಾರ್ಡ್ ವ್ಯಾಪ್ತಿಯಲ್ಲಿ ಇನ್ನೂ ಹೆಚ್ಚಿನ ಹೊಸದಾಗಿ ಬೀದಿದೀಪಗಳು ಬೇಕಾಗಿರುತ್ತದೆ ಎಂದು ಸಭೆಯಲ್ಲಿ ಸಾರ್ವಜನಿಕರು ಕೋರಿರುತ್ತಾರೆ. ಈ ಬಗ್ಗೆ ನೋಡಲ್ ಅಧಿಕಾರಿಗಳು ಸಂಬಂಧ ಪಟ್ಟ ಅಧಿಕಾರಿಗಳಿಗೆ ಹೊಸದಾಗಿ ಬೀದಿ ದೀಪಗಳು ಲಭ್ಯವಿದ್ದಲ್ಲಿ ಸಾರ್ವಜನಿಕರು ಕೋರಿರುವಂತೆ ಬೀದಿದೀಪಗಳನ್ನು ಅಳವಡಿಸಿಕೊಡಲು ಸೂಚಿಸಿದೆ.

5. ಕಾಮಗಾರಿ ಇಲಾಖೆ ಬಗ್ಗೆ ಚರ್ಚಿಸಲಾದ ವಿಷಯಗಳು:-

- ಶ್ರೀ ಮುತ್ತಪ್ಪನವರು ಸಭೆಯಲ್ಲಿ ಮಾತನಾಡುತ್ತಾ ಬಿ.ಇ.ಎಲ್ ಬಡಾವಣೆಯ ಎಸ್.ಬಿ.ಐ ಬ್ಯಾಂಕಿನ ಎದುರು ರಸ್ತೆಯಲ್ಲಿ ಒಂದು ದೊಡ್ಡಗಾತ್ರದ ಹಳ್ಳವೊಂದು ಬಿದ್ದಿದ್ದು, ಇದರಿಂದ ಸಾರ್ವಜನಿಕರು ಮತ್ತು ಮಕ್ಕಳುಗಳು ಹೋಗಿ ಹಳ್ಳದೊಳಗೆ ಬೀಳುವ ಸಾಧ್ಯತೆ ಹೆಚ್ಚಾಗಿರುವುದರಿಂದ ಕೂಡಲೇ ಡೆಡ್‌ಎಂಡ್ ರಸ್ತೆಯ ಹಳ್ಳವನ್ನು ಮುಚ್ಚಿಸಿಕೊಡಬೇಕೆಂದು ಸಭೆಗೆ ಕೋರಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಈ ವಿಷಯದ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.
- ದ್ವಾರಕಾವಾಸ ರಸ್ತೆ ಗಣೇಶ ದೇವಸ್ಥಾನದ ಹತ್ತಿರ ರಸ್ತೆಯಲ್ಲಿ ಗುಂಡಿ ಬಿದ್ದಿರುತ್ತದೆ ಅದನ್ನು ಮುಚ್ಚಿಸಬೇಕು ಮತ್ತು ಮ್ಯಾನ್‌ಹೋಲ್‌ಗೆ ಲಿಡ್ ಹಾಕಬೇಕೆಂದು ಶ್ರೀ ಮುತ್ತಪ್ಪನವರು ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದ ಅಭಿಯಂತರರಿಗೆ ಶೀಘ್ರವಾಗಿ ಕ್ರಮ ಕೈಗೊಳ್ಳಲು ಸೂಚಿಸಿದರು.
- 4ನೇ ಅಡ್ಡರಸ್ತೆ ಮಾರುತಿ ನಗರ ಜವರೇಗೌಡ ಬಡಾವಣೆಯಲ್ಲಿ ರಸ್ತೆಯ ಗುಂಡಿಯನ್ನು ಮುಚ್ಚಿ ರಸ್ತೆಗೆ ಡಾಂಬರೀಕರಣ ಮಾಡಬೇಕೆಂದು ಶ್ರೀ ಧನಂಜಯ್ ರವರು ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮುಂದಿನ ಅನುದಾನದಲ್ಲಿ ಆದ್ಯತೆ ಮೇರೆಗೆ ಕ್ರಮಕೈಗೊಳ್ಳಲು ಸಭೆಯಲ್ಲಿ ತಿಳಿಸಿದರು.
- ತುಂಗಾನಗರ ಪ್ರದೇಶದಲ್ಲಿ ಒಳಚರಂಡಿ ಕಾಮಗಾರಿ ಕೆಲವು ಮುಗಿದು ಹಲವಾರು ತಿಂಗಳುಗಳು ಕಳೆದರೂ ರಸ್ತೆಯ ಕಾಮಗಾರಿ ಕೆಲಸ ಡಾಂಬರೀಕರಣ ಕೆಲಸವನ್ನು ಪ್ರಾರಂಭ ಮಾಡಿರುವುದಿಲ್ಲ. ರಸ್ತೆಗೆ

Scanned with OKEN Scanner

ಡಾಂಬರೀಕರಣ ಇಲ್ಲದೇ ರಸ್ತೆಗಳಲ್ಲಿ ಓಡಾಡಲೂ ನಡೆದಾಡಲೂ ಕೂಡಾ ತುಂಬಾ ಕಷ್ಟ ಸಾಧ್ಯವಾಗಿದೆ. ರಸ್ತೆಗಳ ಧೂಳಿನಿಂದಾಗಿ ಇಲ್ಲಿಯ ನಿವಾಸಿಗಳಿಗೆ ಆರೋಗ್ಯ ಸಮಸ್ಯೆಗಳಾಗಿವೆ. ರಸ್ತೆಗಳಲ್ಲಿರುವ ಹಳ್ಳ, ದಿನ್ನೆಗಳಿಂದ ವಾಹನಗಳಲ್ಲಿ ಓಡಾಡುವುದಕ್ಕೂ ಕಷ್ಟವಾಗಿದೆ. ನಮಗೆಲ್ಲಾ ಮೈಕೈನೋವು ಶುರುವಾಗಿದೆ. ಈ ವಿಚಾರವಾಗಿ ಹಲವಾರು ಸಲ ವಾರ್ಡ್ ಕಮಿಟಿಯ ಸಭೆಯ ಗಮನಕ್ಕೆ ತಂದಾಗಲೂ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ ಎಂದು ತುಂಗಾನಗರದ ಹಿರಿಯ ನಾಗರೀಕರೂ, ವಾರ್ಡ್ ಕಮಿಟಿ ಸದಸ್ಯರೂ, ಕ್ಷೇಮಾಭಿವೃದ್ಧಿಸಂಘದ ನಿರ್ದೇಶಕರು ಆದ ಶ್ರೀ ರಾಮಕೃಷ್ಣ ಭಟ್ ರವರು ಬೇಸರ ವ್ಯಕ್ತಪಡಿಸಿದರು ಹಾಗೂ ಈ ವಿಚಾರವಾಗಿ ಜರೂರಾಗಿ ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರುವಂತೆ ಆಗ್ರಹಪೂರ್ವಕ ವಿನಂತಿ ಮಾಡಿದರು.

6. <u>ಪಶುಸಂಗೋಪನೆ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು</u>

- ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿರುತ್ತದೆ. ರಸ್ತೆಯಲ್ಲಿ ಓಡಾಡುವ ಸಾರ್ವಜನಿಕರಿಗೆ ಮತ್ತು ದ್ವಿಚಕ್ರದಲ್ಲಿ ಹೋಗುವ ಸವಾರರಿಗೆ ಬೀದಿನಾಯಿಗಳು ಕಚ್ಚಲು ಬರುತ್ತಿರುವುದಾಗಿ ಸಭೆಗೆ ತಿಳಿಸಿದರು. ಈ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡಿ ಈ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿಯವರಿಗೆ ಸಭೆಯಲ್ಲಿ ತಿಳಿಸಿದರು.

7. <u>ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಬಗ್ಗೆ ಚರ್ಚಿಸಲಾದ ವಿಷಯಗಳು</u>

- ವಾರ್ಡ್ ವ್ಯಾಪ್ತಿಯಲ್ಲಿ ಇನ್ನೂ ಕೆಲವು ಪ್ರದೇಶಗಳಲ್ಲಿ ಒಳಚರಂಡಿ ಕಾಮಗಾರಿ ಬಾಕಿ ಇದೆ ಎಂದು ಶ್ರೀ ರಾಮಕೃಷ್ಣ ಭಟ್ ರವರು ಸಭೆಗೆ ತಿಳಿಸಿದರು. ಈ ವಿಷಯದ ಬಗ್ಗೆ ನೋಡಲ್ ಅಧಿಕಾರಿಗಳು ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸುವಂತೆ ತಿಳಿಸಿದರು.

ಅಧ್ಯಕ್ಷರು ಮಾತನಾಡಿ ಎಲ್ಲಾ ಅಧಿಕಾರಿಗಳು ಮತ್ತು ಎಲ್ಲ ಇಲಾಖಾ ಅಧಿಕಾರಿಗಳು ಮುಂದಿನ ವಾರ್ಡ್ ಕಮಿಟಿ ಸಭೆಗೆ ಕಡ್ಡಾಯವಾಗಿ ಹಾಜರಾಗಬೇಕೆಂದು ತಿಳಿಸುತ್ತಾ, ಹಾಜರಿಲ್ಲದ ಅಧಿಕಾರಿಗಳ ವಿರುದ್ಧ ಇಲಾಖಾ ಮುಖ್ಯಸ್ಥರಿಗೆ ಪತ್ರ ಬರೆಯಲಾಗುವುದೆಂದು ತಿಳಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

<u>ವಂದಾನಾರ್ಪಣೆಯೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.</u>

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 30. ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ವಾರ್ಡ್ ಕಮಿಟಿ ಅಧ್ಯಕ್ಷರು
ಹಾಗೂ ವಾರ್ಡ್‌ನ ನೋಡಲ್ ಅಧಿಕಾರಿ
ವಾರ್ಡ್ ನಂ 30 ಹೇರೋಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:-</u>

<u>ಅಧಿಕಾರಿಗಳ ಮಾಹಿತಿಗಾಗಿ</u>

1. ಮಾನ್ಯ ಸಹಕಾರ ಸಚಿವರು, ಕರ್ನಾಟಕ ಸರ್ಕಾರ, ರವರ ಆಪ್ತಶಾಖೆಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ವಲಯ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು, ರಾ.ರಾ.ನಗರ ವಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು, ರಾ.ರಾ.ನಗರ ವಲಯ ರವರ ಅವಹಾಹನೆಗಾಗಿ ಸಲ್ಲಿಸಿದೆ.
6. ಉಪ ನಿಯಂತ್ರಕರು (ಹಣಕಾಸು), ರಾ.ರಾ.ನಗರ ವಲಯ ರವರ ಮಾಹಿತಿಗಾಗಿ ಕಳುಹಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಕೆಂ.ಪಿ ರವರ ಮಾಹಿತಿಗಾಗಿ ಕಳುಹಿಸಿದೆ.
8. ಆರೋಗ್ಯ ವೈದ್ಯಾಧಿಕಾರಿಗಳು ಯಶವಂತಪುರ ರವರ ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ನಿರ್ದೇಶಕರು, (ಪಶು ಸಂಗೋಪನೆ) ಇಲಾಖೆ ರವರ ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೇ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ.
12. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ರವರ ಮಾಹಿತಿಗಾಗಿ ಕಳುಹಿಸಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.

Scanned with OKEN Scanner

14.ಹಿರಿಯ ಆರೋಗ್ಯ ಪರಿವೀಕ್ಷಕರು. ವಾರ್ಡ್ ನಂ.72. ಹೇರೋಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
15.ಪೋಲೀಸ್ ಇನ್‌ಸ್ಪೆಕ್ಟರ್. ಬ್ಯಾಡರಹಳ್ಳಿ ರವರ ಮಾಹಿತಿಗಾಗಿ ಕಳುಹಿಸಿದೆ.
16.ಅಧೀಕ್ಷಕರು (ಪಾರ್ಕ್‌ಗಳ ನಿರ್ವಹಣೆ) ತೋಟಗಾರಿಕೆ ಇಲಾಖೆ ರವರ ಮಾಹಿತಿಗಾಗಿ ಕಳುಹಿಸಿದೆ.